ಬಹಳಷ್ಟು ಸುದೀರ್ಘವಾಗಿ UKP Stage-3 ಬಗ್ಗೆ ನಮ್ಮ ಕೃಷ್ಣಾ ಅವಾರ್ಡ್ ಆದ ಮೇಲೆ, ಆಗಿರುವ ಬೆಳವಣಿಗೆಯಿಂದ ಹಿಡಿದು..

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೇ ಅವಕಾಶ ಕೊಡಿ.

ಅಧ್ಯಕ್ಷರು : ನೀವು ಸಹಿ ಮಾಡಿಲ್ಲ, ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) : ಅವಕಾಶ ಕೊಡಲೇಬೇಕು, ಇಲ್ಲದಿದ್ದರೆ ನಾನು ಬಾವಿಗೆ ಬರಬೇಕಾಗುತ್ತದೆ.

ಅಧ್ಯಕ್ಷರು : ಅವಕಾಶವಿಲ್ಲ, ಕುಳಿತುಕೊಳ್ಳದಿದ್ದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಬನ್ನಿ. ಅಲ್ಲೆಲ್ಲಾ ನಿಂತು ಮಾತನಾಡಿದರೆ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಸಭಾಧ್ಯಕ್ಷರೆ, ಶ್ರೀ ಎಂ.ಬಿ. ಪಾಟೀಲ್‌ರು ಸುದೀರ್ಘವಾಗಿ ಯುಕೆಪಿ ಸ್ಟೇಜ್ 3 ಬಗ್ಗೆ ಮಾತನಾಡಿದ್ದಾರೆ. ಅವರ ಮುಖ್ಯವಾಗಿರುವಂಥ ಉದ್ದೇಶ ಈ ಕಾಮಗಾರಿಗಳು ತೀವ್ರಗತಿಯಲ್ಲಿ ಆಗಬೇಕು ಎನ್ನುವುದು, ಒದಗಿಸಿರುವ ಹಣಕಾಸು.....

ಅಧ್ಯಕ್ಷರು : ಅಲ್ಲೆಲ್ಲಾ ನಿಂತು ಕೊಂಡು ಮಾತನಾಡಿದರೆ ಹೊರಗಡೆ ಹೋಗಬೇಕಾಗುತ್ತದೆ.

(ಈ ಹಂತದಲ್ಲಿ ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) ರವರು ಸದನದ ಬಾವಿಯೊಳಗೆ ಬಂದು ನಿಂತು, ನೀವು ಯಾವುದೇ ಶಿಕ್ಷೆ ಕೊಟ್ಟರೂ ನಾನು ರೆಡಿ ಇದ್ದೇನೆ ಎಂದು ಹೇಳಿದರು.)

ಶ್ರೀ ಸಿದ್ದರಾಮಯ್ಯ : ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು : ಸಾರ್ ಅವರು ಸಹಿ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಕೋಪಿಸಿಕೊಳ್ಳಬೇಡಿ,

ಶ್ರೀ ಬಸವರಾಜ ಬೊಮ್ಮಾಯಿ : ನಾನು 5 ನಿಮಿಷ ಉತ್ತರ ಕೊಡುತ್ತೇನೆ. ನಂತರ ಅವರು ಮಾತನಾಡಲಿ. ನೀವು ಏನು ಹೇಳುತ್ತೀರೋ ಅದಕ್ಕೆ clarify ಮಾಡುತ್ತೇನೆ.